ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	(411) 212
ಸದಸ್ಯರ ಹೆಸರು	:	ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ
ಉತ್ತರಿಸುವ ಸಚಿವರು	:	(ಶ್ರೀ ಎಸ್.ಸುರೇಶ್ ಕುಮಾರ್) ಪೌರಾಡಳಿತ ಸಚಿವರು

ಅ ಬೀದರ್ ಜಿಲ್ಲಾಧಿಕಾರಿಗಳು ಬೀದರ್ ನಗರದಲ್ಲಿ ರಸ್ತೆಗಳ ಅಗಲೀಕರಣಕ್ಕಾಗಿ ಎಷ್ಟು ಕಟ್ಟಡಗಳನ್ನು ಕೆಡವುವಂತೆ ಆದೇಶ ನೀಡಿದ್ದಾರೆ (ಪ್ರತಿ ಪ್ರದೇಶದ ಬಗ್ಗೆ ಪ್ರತ್ಯೇಕ ವಿವರಗಳನ್ನು ಒದಗಿಸುವುದು);

ಬೀದರ್ ನಗರದಲ್ಲಿ 866 ಒತ್ತುವರಿ ಪ್ರಕರಣಗಳನ್ನು ತೆರವುಗೊಳಿಸಲಾಗಿದೆ. ಈ ಪೈಕಿ 8 ಪ್ರಕರಣಗಳಲ್ಲಿ ಒಡೆದು ಹಾಕಲು ನಗರಸಭೆಯಿಂದ ಆದೇಶ ನೀಡಲಾಗಿದೆ. ಉಳಿದ 858 ಪ್ರಕರಣಗಳಲ್ಲಿ ನಗರಸಭೆ, ಬೀದರ್ ವತಿಯಿಂದ ನಿಯಮಾವಳಿಯಂತೆ ಅತಿಕ್ರಮಣದಾರರಿಗೆ ನೋಟೀಸ್ ನೀಡಲಾಗಿರುತ್ತದೆ. ಅತಿಕ್ರಮಣದಾರರಿಂದ ಒತ್ತುವರಿಯಾಗಿರುವ ಜಾಗವನ್ನು ಗುರುತು ಮಾಡಲಾಗಿರುತ್ತದೆ ಹಾಗೂ ಅತಿಕ್ರಮಣದಾರರು ಗುರುತು ಮಾಡಿರುವ ಜಾಗವನ್ನು ಸ್ವಇಚ್ಛೆಯಿಂದ ತೆರವುಗೊಳಿಸಿರುತ್ತಾರೆ. ತೆರವುಗೊಳಿಸಿರುವ ಜಾಗದಲ್ಲಿನ ಅವಶೇಷಗಳನ್ನು ನಗರಸಭೆಯಿಂದ ತೆಗೆದು ಹಾಕಲಾಗಿರುತ್ತದೆ.

ಆ ಇದಕ್ಕಾಗಿ ಕಟ್ಟಡದ/ಮನೆಯ ಮಾಲಿಕರುಗಳಿಗೆ ಪರಿಹಾರವನ್ನೇನಾದರೂ ನೀಡಲಾಗಿದೆಯೇ; ನೀಡಿದ್ದಲ್ಲಿ, ಯಾರ ಯಾರಿಗೆ ಎಷ್ಟೆಷ್ಟು ಪರಿಹಾರವನ್ನು ನೀಡಲಾಗಿದೆ (ಹೆಸರು ವಿವರ ಒದಗಿಸುವುದು);

ಅಧಿಕೃತ ಕಟ್ಟಡಗಳನ್ನು ಮಾತ್ರ ತೆರವುಗೊಳಿಸಿರುವುದರಿಂದ ಕಟ್ಟಡದ/ಮನೆಯ ಮಾಲೀಕರುಗಳಿಗೆ ಯಾವುದೇ ಪರಿಹಾರ ನೀಡಲು ನಿಯಮಗಳಲ್ಲಿ ಅವಕಾಶ ಇರುವುದಿಲ್ಲ.

ಇ ರಸ್ತೆಯ ಅಗಲೀಕರಣದ ಹೆಸರಿನಲ್ಲಿ ಕಟ್ಟಡಗಳನ್ನು ಕೆಡವಿದ್ದು ಪರ್ಯಾಯ ವ್ಯವಸ್ಥೆಯನ್ನು ಮಾಡುವಲ್ಲಿ ವಿಳಂಬ ಮಾಡುತ್ತಿರುವುದು ಹಾಗೂ ಈಗ ಮಳೆಗಾಲ ಪ್ರಾರಂಭವಾಗಿರುವುದರಿಂದ ಇಲ್ಲಿನ ಸಾರ್ವಜನಿಕರಿಗೆ ತೀವ್ರ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ತೊಂದರೆಯನ್ನು ತಪ್ಪಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ;

ತೆರವು ಮಾಡಿದವರಲ್ಲಿ ಪರ್ಯಾಯ ವ್ಯವಸ್ಥೆಯಾಗಿ ನಗರಸಭೆ ವತಿಯಿಂದ ಸುಮಾರು 29 ಮಳಿಗೆಗಳನ್ನು ಸಣ್ಣ ಪುಟ್ಟ ವ್ಯಾಪಾರಿಗಳಿಗೆ ಕಡಿಮೆ ಠೇವಣಿ ಹಾಗೂ ಬಾಡಿಗೆ ನಿಗದಿ ಮಾಡಿ ನೀಡಲಾಗಿದೆ. ಪೂರ್ಣ ಮನೆ ಕಳೆದುಕೊಂಡ ಬಡವರಿಗೆ ಆಶ್ರಯ ಯೋಜನೆಯಡಿಯಲ್ಲಿ 108 ಮನೆಗಳನ್ನು ನೀಡಲಾಗಿದೆ. ಸಾರ್ವಜನಿಕರಿಗೆ ತೊಂದರೆಯಾಗದಂತೆ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲು ಸೂಚಿಸಲಾಗಿದೆ.

ಈ ಇಲ್ಲಿಯವರೆವಿಗೆ ಯಾವ ಯಾವ ರಸ್ತೆಗಳನ್ನು ಅಗಲೀಕರಣ ಮತ್ತು ದುರಸ್ತಿ ಮಾಡಲಾಗಿದೆ; ಹಾಳಾಗಿರುವ ಎಷ್ಟು ಚರಂಡಿಗಳನ್ನು ದುರಸ್ತಿ ಮಾಡಲಾಗಿದೆ.

1) ಅಂಬೇಡ್ಕರ್ ವೃತ್ತದಿಂದ ಗವಾನ್ ವೃತ್ತದವರೆಗಿನ ರಸ್ತೆ
2) ನಯಾ ಕಮಾನದಿಂದ ಚೌಬಾರದವರೆಗಿನ ರಸ್ತೆ
3) ಮಹಾವೀರ ಸರ್ಕಲ್‌ನಿಂದ ಎ.ಪಿ.ಎಂ.ಸಿ.ವರೆಗಿನ ರಸ್ತೆ
4) ಬೊಮ್ಮಗೊಂಡೇಶ್ವರ ವೃತ್ತದಿಂ ಬಿ.ಬಿ.ವಿ. ಕಾಲೇಜ್‌ವರೆಗಿನ ರಸ್ತೆ
5) ಸ್ಟೇಡಿಯಂ ರಸ್ತೆ
6) ಕೆ.ಹೆಚ್.ಬಿ. ಕಾಲೋನಿಯ ರಸ್ತೆ– ಇವುಗಳ ಅಗಲೀಕರಣ ಮತ್ತು ಚರಂಡಿ ದುರಸ್ತಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**(448) 213**
ಸದಸ್ಯರ ಹೆಸರು	:	**ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ**
ಉತ್ತರಿಸುವ ಸಚಿವರು	:	**(ಶ್ರೀ ಎಸ್.ಸುರೇಶ್) ಕುಮಾರ್ ಪೌರಾಡಳಿತ ಸಚಿವರು**

1 ಭಾಲ್ಕಿ ಪುರಸಭೆಯಿಂದ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ತೆಗೆದುಕೊಳ್ಳಲಾಗಿದೆ; ಇದಕ್ಕೆ ಪ್ರತಿ ವರ್ಷ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ.

ಕಳೆದ ಮೂರು ವರ್ಷಗಳಲ್ಲಿ ಕುಡಿಯುವ ನೀರು ರಸ್ತೆ ಅಭಿವೃದ್ಧಿ, ವಿದ್ಯುದ್ದೀಕರಣ ಮತ್ತು ಚರಂಡಿ ಕಾಮಗಾರಿಗಳಿಗಾಗಿ ಈ ಕೆಳಕಂಡಂತೆ ವೆಚ್ಚ ಮಾಡಲಾಗಿದೆ.

2005–06 – ರೂ.62.90 ಲಕ್ಷಗಳು

2006–07 – ರೂ.137.72 ಲಕ್ಷಗಳು

2007–08 – ರೂ.45.70 ಲಕ್ಷಗಳು

2 ಪ್ರಸಕ್ತ ವರ್ಷದಲ್ಲಿ ಈ ಪುರಸಭೆ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ಯಾವ ಯಾವ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಯೋಜನೆ ರೂಪಿಸಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ; ಇದಕ್ಕೆ ಅಗತ್ಯವಿರುವ ಹಣವೆಷ್ಟು; ಈ ಪೈಕಿ ಇಲ್ಲಿಯವರೆವಿಗೆ ಸರ್ಕಾರದಿಂದ ಎಷ್ಟು ಹಣ ಬಿಡುಗಡೆಯಾಗಿದೆ; ಇದರಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗಿದೆ;

ಸರ್ಕಾರಕ್ಕೆ ಯಾವುದೇ ಪ್ರಸ್ತಾವನೆ ಸಲ್ಲಿಸಿರುವುದಿಲ್ಲ. ಆದರೆ, ಪ್ರಸಕ್ತ ವರ್ಷದಲ್ಲಿ ಎಸ್.ಎಫ್.ಸಿ. ಯೋಜನೆ ಅಡಿಯಲ್ಲಿ ಮೂಲಭೂತ ಸೌಕರ್ಯ ಕಲ್ಪಿಸಲು ರೂ.302.88 ಲಕ್ಷ ಹಣ ನಿಗಧಿಪಡಿಸಿದ್ದು, ಮಾಸಿಕವಾಗಿ ರೂ.25.24 ಲಕ್ಷ ಹಣವನ್ನು ಬಿಡುಗಡೆ ಮಾಡಲಾಗುತ್ತಿದೆ.